ಸಿ.ಸಿ ನಂಬ್ರ: 426/2023
ಪಿ.ಡಬ್ಲ್ಯೂ : 1

ದಿನಾಂಕ: 23-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್ ಕೆ ಎನ್. ವಕೀಲರಿಂದ

1. ನಾನು PWD ಕಾಂಟ್ರೆಕ್ಟರ್ ಆಗಿ ಕೆಲಸ ಮಾಡುತ್ತೇನೆ. ಆರೋಪಿತ ನನ್ನ ಹತ್ತಿರದ ಸಂಬಂಧಿ. ಈ ಹಿಂದೆ ನಾನು ಮತ್ತು ಆರೋಪಿ ಒಟ್ಟಾಗಿ ಕಾಂಟ್ರೆಕ್ಟರ್ ಕೆಲಸ ಮಾಡುತ್ತಿದ್ದೇವು, ಈಗ ಇಲ್ಲ. ನಾವು ಸರ್ಕಾರದಿಂದ ಕಾಂಟ್ರೆಕ್ಟ್ ತೆಗೆದುಕೊಳ್ಳುತ್ತೇವೆ. ಆರೋಪಿತನ ಜೊತೆಗೆ ಸೇರಿ ಅರಸಿಕೇರೆ,ಬಾಣಾವಾರದಲ್ಲಿ ಕಾಂಟ್ರೆಕ್ಟ್ ಕೆಲಸ ಮಾಡಿರುತ್ತೇನೆ. ಅದು 70 ಲಕ್ಷದ ಕೆಲಸ ಆಗಿರುತ್ತದೆ. ಅದೊಂದೆ ಕೆಲಸ ಒಟ್ಟಾಗಿ ಮಾಡಿರುತ್ತೇನೆ, ಆ ನಂತರ ಒಟ್ಟಾಗಿ ಮಾಡಿರುವುದಿಲ್ಲ. ನಾನು ಕ್ಲಾಸ್ -1 ಕಾಂಟ್ರೆಕ್ಟರ್ ಇರುತ್ತೇನೆ.

2. ನನಗೆ ಬ್ಯಾಂಕಿನ ವ್ಯವಹಾರ ಮಾಡಿ ಸಾಕಷ್ಟು ಅನುಭವ ಇರುತ್ತದೆ. ನಾನು 3 ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರ. ನಾನು ಈ ಎಲ್ಲಾ ವ್ಯವಹಾರವನ್ನು ಆಡಿಟ್ ಮಾಡಿಕೊಳ್ಳುತ್ತೇನೆ. ಆಡಿಟ್ ನಲ್ಲಿ ನಾನು ಆರೋಪಿಗೆ ಹಣ ಕೊಟ್ಟ ಬಗ್ಗೆ ಕಾಣಿಸುವುದಿಲ್ಲ. ಆರೋಪಿತ ನನಗೆ 10 ಲಕ್ಷ ಕೊಡಬೇಕಿತ್ತು, ಆರೋಪಿತ 3 ಲಕ್ಷ ಕೊಟ್ಟಿರುತ್ತಾನೆ, ಇನ್ನು 7 ಲಕ್ಷ ಬಾಕಿ ಬರಬೇಕಾಗಿರುತ್ತದೆ. ಆರೋಪಿತನಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನಾನು ಕ್ಯಾಶ್ ಕೊಟ್ಟಿದ್ದೆ ಎಂದು ನುಡಿಯುತ್ತಾರೆ.

3. ಆರೋಪಿತನ ಜೊತೆಗೆ ಮಾಡಿದ ವ್ಯವಹಾರದ ಬಗ್ಗೆ ಡೈರಿಯನ್ನು ಇಟ್ಟುಕೊಂಡಿರುವುದಿಲ್ಲ, ಅದನ್ನು ವ್ಯವಹಾರ ಮಾಡುವಾಗ ಬರೆದುಕೊಂಡಿರುತ್ತೇನೆ. ನಾನು ಕೆಲಸದವರಿಗೆ ಹಣ ಕೊಟ್ಟಿದ್ದನ್ನು ಬರೆದುಕೊಂಡಿರುತ್ತೇನೆ. ಆರೋಪಿಗೆ ಹಣ ಕೊಟ್ಟ ಬಗ್ಗೆ ಡೈರಿಯಲ್ಲಿ ನಮೂದು ಮಾಡಿರುವುದಿಲ್ಲ. ನಾನು 10 ಲಕ್ಷ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ನಾನು ಕಾಂಟ್ರೆಕ್ಟರ್ ಕೆಲಸವನ್ನು ಅರಸಿಕೇರೆ, ಬಾಣಾವರದಲ್ಲಿ ಮಾಡಿರುತ್ತೇನೆ. ಅರಸಿಕೆರೆಯಲ್ಲಿ ಆರೋಪಿತನ ಜೊತೆಗೆ ಸೇರಿ 70 ಲಕ್ಷ ಕೆಲಸ ಮಾಡಿರುತ್ತೇನೆ. ಆರೋಪಿ ಬೆಂಗಳೂರಿನಲ್ಲಿ ವಾಸ ಇದ್ದನು ಎಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲ, ಆದರೆ ಮನೆ ಮಾತ್ರ ಬೆಂಗಳೂರಿನಲ್ಲಿ ಇರುತ್ತದೆ, ನಾನು ಬೆಂಗಳೂರಿನ ವಿಳಾಸಕ್ಕೆ ನೋಟಿಸು ಕೊಟ್ಟಿರುತ್ತೇನೆ. ಆತ ಬೆಂಗಳೂರಿನಲ್ಲಿ ವಾಸ ಇರುವ ಬಗ್ಗೆಪ್ರಕರಣ ದಾಖಲಿಸುವ ಪೂರ್ವದಲ್ಲಿ ಗೊತ್ತಿತ್ತು ಎಂದರೆ ಸರಿ.

4. ವ್ಯವಹಾರವೆಲ್ಲಾ ಬೆಂಗಳೂರಿನಲ್ಲಿ ನಡೆಸಿದ್ದರೂ ಉದ್ದೇಶಪೂರ್ವಕವಾಗಿ ಅವರನ್ನು ಅಲೆಸಬೇಕು ಎಂಬ ಕಾರಣದಿಂದ ಪ್ರಕರಣವನ್ನು ಈ ನ್ಯಾಯಲಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟಿಸು ಅವರಿಗೆ ತಲುಪಬಾರದು ಎಂದು ಸರಿಯಾದ ವಿಳಾಸಕ್ಕೆ ನೋಟಿಸು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಸರಿಯಾದ ವಿಳಾಸಕ್ಕೆ ನೋಟಿಸು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 30-12-2020 ರಂದು ಆತ ನನಗೆ 3 ಲಕ್ಷದ ಚೆಕ್ ಕೊಟ್ಟಿದ್ದು ಅದನ್ನು ನಾನು ಬ್ಯಾಂಕಿಗೆ ಹಾಕಿದ್ದೆ.

ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ